**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 641/2023**
**ಸಿಡಬ್ಲು ಃ 1**
**ಪಿಡಬ್ಲು ಃ 1**

**ಹೆಸರು** ಃ ನಿತಿನಕುಮಾರ ಗೋವಿಂದಪ್ಪ
**ವಯಾ** ಃ 30 ವರ್ಷ
**ಉದ್ಯೋಗ** ಃ ಪಿ ಎಸ್ ಐ, ಸೈಬರ ಕ್ರೈಮ ಪೋಲಿಸ ಠಾಣೆ , ಬಾಗಲಕೋಟ
**ವಾಸ** ಃ ಬಾಗಲಕೋಟ

**(ದಿನಾಂಕಃ 24-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

**1.** ನಾನು 2020 ರಿಂದ 2023 ಆಗಷ್ಟ ವರೆಗೆ ನಾನು ಯಮಕನಮರಡಿ ಪೋಲಿಸ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ಮಾಡಿರುತ್ತೇನೆ.

**2.** ದಿನಾಂಕ 01-04-2023 ರಂದು ಸಾಯಂಕಾಲ 7-00 ಗಂಟೆಗೆ ನಾನು ಪಾಶ್ಚಾಪೂರ ಉಪಠಾಣೆಯಲ್ಲಿ ಇದ್ದಾಗ ಬಗರನಾಳ ಗ್ರಾಮದ ಬಸ್ ನಿಲ್ದಾಣ ಮುಂದೆ ಒಬ್ಬ ವ್ಯಕ್ತಿ ಲಗಮಪ್ಪ ಬರಮಣ್ಣಗೋಳ ತನ್ನ ಸ್ವಂತ ಪಾಯಿದೆಗೋಸ್ಕರ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ನಮಗೆ ವಿಷಯ ತಿಳಿದ ಕೂಡಲೇ ನಾನು ನಮ್ಮ ಸಿಬ್ಬಂದಿಗಳಾದ ಎಚ್ ಸಿ 2676 ಹಾಗೂ ಪಿಸಿ 1307 ಇವರಿಗೆ ವಿಷಯ ತಿಳಿಸಿ , ಪಿಸಿ 1307 ಇವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ಅವರು ಇಬ್ಬರು ಪಂಚರನ್ನು ಕರೆದುಕೊಂಡು ಬಂದರು . ಪಂಚರಲ್ಲಿ ಒಬ್ಬರ ಹೆಸರು ಅಶೋಕ ಸಾಃ ದಾದಬಾನಹಟ್ಟಿ ಹಾಗೂ ಕೃಷ್ಣಾ ಸಾಃ ಸಂಕೇಶ್ವರ ಗ್ರಾಮದವರು. ಪಂಚರಿಗೆ ಬಂದ ಮಾಹಿತಿ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದ್ದು ಅವರು ಒಪ್ಪಿದ ನಂತರ ಬಾತ್ಮಿ ಇದ್ದ ಸ್ಥಳಕ್ಕೆ ಸಾಯಂಕಾಲ 7-15 ಕ್ಕೆ ಬಿಟ್ಟು 7-25 ಕ್ಕೆ ಅಲ್ಲಿಗೆ ಒಂದು ಖಾಸಗಿ ಕಾರಿನಲ್ಲಿ ತಲುಪಿ, ಅಲ್ಲಿ ಮರೆಯಲ್ಲಿ ನಿಂತು ವಾಚ್ ಮಾಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ನೀಲಿ ಬಣ್ಣದ ಕೈಚೀಲ ಹಿಡಿದುಕೊಂಡು ನಿಂತಿದ್ದು , ನಮಗೆ ಅನುಮಾನ ಬಂದು ಆತನಿಗೆ ವಿಚಾರಿಸಿದಾಗ ಆತನ ಹೆಸರು ಲಗಮಪ್ಪಾ ಭೀಮಪ್ಪಾ ಬರಮಣ್ಣಗೋಳ ಸಾಃ ಬಗರನಾಳ ಎಂದುಹೇಳಿದ್ದು ಆನ ಕೈಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಎಂ ಎಲ್ ನ 92 ಬ್ಯಾಗಪೈಪರ

ಟ್ರಿಬಲ ಎಕ್ಸ ರಂನ ಪ್ಯಾಕೆಟಗಳು ಇರುವುದು ಕಂಡು ಬಂತು. ಪಂಚರ ಸಮಕ್ಷಮ ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಮೇಲೆ ಹೇಳಿದ ಮದ್ಯದಿಂದ 90 ಎಂ ಎಲ್ ನಷ್ಟು 2 ಪ್ಯಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು, ಬಿಳಿ ಬಟ್ಟೆಯಿಂದ ಪ್ಯಾಕಮಾಡಿ ಅದನ್ನು ಅರಗಿನಿಂದ ಶೀಲು ಮಾಡಿ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು. ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಲಾಯಿತು. ನಂತರ ಸಿಕ್ಕಂತಹ ಮುದ್ದೆಮಾಲು ತೆಗೆದುಕೊಂಡು ಕಛೇರಿಗೆ ಹೋಗಿ ಸರಕಾರದ ಪರವಾಗಿ ನಾನು ಫಿರ್ಯಾದನ್ನು ಸಲ್ಲಿಸಿರುತ್ತೇನೆ. ಮುದ್ದೆಮಾಲನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದೆ ಇರುವ ನೀಲಿ ಕೈಚೀಲ ಹಾಗೂ 2 ಮದ್ಯದ ಪ್ಯಾಕೇಟಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

ಮು.ಮಾ.1 ರಿಂದ 3 ಎಂದು ಗುರುಸಲಾಯಿುತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಸಿರುತ್ತಾರೆ.

ನಾನು ಕೊಟ್ಟ ದೂರನ್ನು ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ . ಅದನ್ನು ನಿ.ಪಿ-1 ಎಂದು ಸಾಕ್ಷಿಯ ಸಹಿಯನ್ನ ನಿ.ಪಿ-1(ಎ) ಎಂದು ಗುರುತಿಸಲಾಯಿತು. ಅಂದು ಮಾಡಿದ ಪಂಚನಾಮೆ ಈಗ ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ . ಅದನ್ನು ನಿ.ಪಿ-2 ಎಂದು ಸಾಕ್ಷಿಯ ಸಹಿಯನ್ನ ನಿ.ಪಿ-2(ಎ) ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಶ್ರೀ ಐ ವಾಯ್ ಜಿನರಾಳ ಆರೋಪಿ ಪರ ವಕೀಲರಿಂದ -</u>**

ಆರೋಪಿ ಪರ ವಕೀಲರು ಗೈರು ಹಾಜರ ಆಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**